

ಹಾಸ್ಯದ ಚೌಕಟ್ಟು ವಿಸ್ತರಿಸಿರುವ ‘ಫ್ರೆಂಡ್ಸ್’ ಕಾಮಿಡಿ ಸರಣಿ

ಹಾಸ್ಯ ರಸಾಯನ ಉಣಬಡಿಸುತ್ತಿರುವ ಶ್ರವಣ್ ಐತಾಳ್ ಈ ವಿದ್ಯಮಾನವನ್ನು ಬೇರೆಯದೇ ರೀತಿ ವ್ಯಾಖ್ಯಾನಿಸುತ್ತಾರೆ: ‘ಮೊನ್ನೆ ಲಾಕ್‌ಡೌನ್ ಮುಗಿದ ಮೇಲೆ ಮದ್ಯದಂಗಡಿ ಎದುರು ಹುಡುಗಿಯರು ಸಾಲಗಟ್ಟಿ ನಿಂತದ್ದನ್ನು ದೊಡ್ಡ ವಿದ್ಯಮಾನ ಎಂಬಂತೆ ಅನೇಕರು ಮಾತಾಡಿದರು. ಕುಡಿಯುವವರು ಗಂಡಸರೇ ಆಗಬೇಕಾ? ಇದು ನಮ್ಮ ಸಮಾಜದ ಮನಸ್ಥಿತಿ. ಹುಡುಗರು ಪೋಲಿ ಮಾತನಾಡಿದರೆ, ಡಬ್ಬಲ್ ಮೀನಿಂಗ್ ಹೇಳಿದರೆ ಒಪ್ಪುವ ನಾವು ಹುಡುಗಿಯರು ಹಾಗೆ ಮಾತಾಡಿದರೆ, ಏನೋ ಆಗಬಾರದ್ದು ಆದವರಂತೆ ಪ್ರತಿಕ್ರಿಯೆ ನೀಡುತ್ತೇವೆ. ನನಗೂ ಇಪ್ಪತ್ತೆರಡನೇ ವಯಸ್ಸಿನವರೆಗೆ ಹುಡುಗಿಯರು ಸೀರೆ ಉಟ್ಟುಕೊಂಡು, ಕುಂಕುಮ ಇಟ್ಟುಕೊಂಡು ಸಂಪ್ರದಾಯಬದ್ಧವಾಗಿಯೇ ಇರಬೇಕು ಎಂಬ ಭಾವನೆ ಇತ್ತು. ಈಗ ನಾನು ಈ ವಿಷಯದಲ್ಲಿ ತುಂಬ ಮೆಚ್ಯೂರ್ ಆಗಿದ್ದೇನೆ. ಮುಟ್ಟಿನ ವಿಷಯದ ಕುರಿತು ನಾವು ಓಪನ್ ಸ್ಪೇಸ್‌ನಲ್ಲಿ ಮಾತಾಡಿದರೆ ಎಷ್ಟೋ ಜನರಿಗೆ ಆಗುವ ಮುಜುಗರ ತಪ್ಪುತ್ತದೆ. ಹಾಗಂತ ಹಾಸ್ಯ ಪ್ರಸಂಗಗಳಲ್ಲಿ ಕಂಟೆಂಟ್ ತುಂಬಾ ಮುಖ್ಯವಾಗುತ್ತದೆ. ಅದು ಇಲ್ಲದೇ ಇದ್ದರೆ ವರ್ಕ್ ಆಗೊಲ್ಲ. ಬಹುಶಃ ಹೆಣ್ಣುಮಕ್ಕಳನ್ನು ಇಷ್ಟು ದಿನ ಹತ್ತಿಕ್ಕಿದ್ದೆವಲ್ಲ; ಅದನ್ನು ಬ್ರೇಕ್ ಮಾಡೋಕೆ ಈ ರೀತಿಯ ಹಾಸ್ಯಪ್ರಸಂಗಗಳನ್ನು ಅವರು ಮಾಡುತ್ತಾ ಇರಬಹುದು. ಕನ್ನಡದಲ್ಲಿ ಇಂತಹ ಹಾಸ್ಯ ಸ್ವೀಕೃತವಾಗುವುದು ಬಹಳ ಕಷ್ಟ. ಹನುಮಂತಪ್ಪ ಎಂಜಿನಿಯರಿಂಗ್ ಕಾಲೇಜು ಅಂತ ನಮ್ಮ ಹುಡುಗನೊಬ್ಬ ಹಾಸ್ಯಪ್ರಸಂಗದಲ್ಲಿ ಬಳಸಿದ್ದ. ಅದಕ್ಕೆ ಹನುಮಂತನ ಭಕ್ತರು ಅವನನ್ನು ಇನ್ನಿಲ್ಲದಂತೆ ಟ್ರೋಲ್ ಮಾಡಿದ್ದರು. ದೇವರ ಹೆಸರಿನ ಬಾರ್‌ಗಳನ್ನು ನೋಡಿ ಸುಮ್ಮನಿರುವ ಜನ ಎಂಜಿನಿಯರಿಂಗ್ ಕಾಲೇಜಿಗೆ ಹನುಮಂತನ ಹೆಸರಿಟ್ಟರೆ ಅದ್ಯಾಕೆ ಹೀಗೆ ಕೆರಳುತ್ತಾರೆ ಎನ್ನುವುದು ನನಗೆ ಪ್ರಶ್ನೆಯಾಗಿದೆ. ನಮ್ಮ ಸಿನಿಮಾಗಳಲ್ಲೂ ಹೊಸ ಸಂವೇದನೆಗಳನ್ನು ಒಪ್ಪುವ ಮನಸ್ಸುಗಳು ಮೂಡಬೇಕು.’ ಶ್ರವಣ್ ಮಾತುಗಳು ಬದಲಾದ ಕಾಲ ಹಾಗೂ ಮನೋಧರ್ಮದ ಕುರಿತು ಬೆಟ್ಟು ಮಾಡುತ್ತವೆ.

‘ಗಂಟೂಮೂಟೆ’, ‘ನಾತಿಚರಾಮಿ’ ಸಿನಿಮಾಗಳಲ್ಲಿ ಅಂತಹ ಧ್ವನಿ ಇತ್ತಾದರೂ ಜನರಿಗೆ ಅದರ ಸೂಕ್ಷ್ಮ ಅಷ್ಟಾಗಿ ಅರ್ಥವಾಗಲಿಲ್ಲ. ಉಪೇಂದ್ರ ಸಿದ್ಧಮಾದರಿಯನ್ನು ಮುರಿದಾಗ ಕೆಲವರು ಹುಚ್ಚುತನ ಎಂದು ಲೇವಡಿ ಮಾಡಿದ್ದರು. ಹೆಣ್ಣುಮಕ್ಕಳ ಎಷ್ಟೋ ತುಮುಲಗಳು, ಭಾವನೆಗಳು ನಮಗೆ ಚೆನ್ನಾಗಿ ಅರ್ಥವಾಗಲು ಈ ರೀತಿಯ ಎಕ್ಸ್‌ಪ್ರೆಸಿವ್ ಆದ ಕಂಟೆಂಟ್ ಸಹಕಾರಿಯಾಗಿದೆ. ನಾವು ಚರ್ಚಿಸುವಾಗ ಹುಡುಗಿಯರೂ ತಂಡದಲ್ಲಿ ಇರುತ್ತಾರೆ. ಆಗ ಕೆಲವು ಸೂಕ್ಷ್ಮಗಳು ಅರ್ಥವಾಗುತ್ತವೆ. ಸ್ಟ್ಯಾಂಡ್ ಅಪ್ ಕಾಮಿಡಿಯಲ್ಲಿ ಒಂದೇಸಮನೆ ಸೆಕ್ಸಿಸ್ಟ್ ಸರಕನ್ನು ಹೇಳಿ ಹೇಳಿ ಕೆಲವರಷ್ಟೇ ಜನಪ್ರಿಯರಾಗಿರಬಹುದು. ಆದರೆ, ಗಟ್ಟಿಯಾದ ಕಂಟೆಂಟ್ ಇಲ್ಲದೇ ಇದ್ದರೆ ಅವೆಲ್ಲವೂ ಜೊಳ್ಳೇ.’

ಹಾಗೆ ನೋಡಿದರೆ, ಪೋಲಿತನ ಸಹಜವಾದದ್ದೇ. ಪಠ್ಯಪುಸ್ತಕದ ನಡುವೆ ರತಿಕೃತಿಯ ರಸಾನುಭವ ಪಡೆಯುವ ಪಡ್ಡೆಗಳು ಅಂದೂ ಇದ್ದರು. ಇಂದು ಹುಡುಗರು ಅಂಗೈ ಅಗಲದ ಮೊಬೈಲ್‌ನಲ್ಲಿ ಅಂತಹ ತುಣುಕುಗಳ ಇಣುಕುತ್ತಿದ್ದಾರೆ. ಕುಣಿಗಲ್ ನಾಗಭೂಷಣ ಬರೆದ ಪರಮ ಪೋಲಿ ಸಿನಿಮಾ ಹಾಸ್ಯ ಪ್ರಸಂಗ ಬಂದಾಗ ಅಜ್ಜಿ ‘ಏನಿದು ಅಸಹ್ಯ’ ಎನ್ನುತ್ತಾ ಟಿ.ವಿ. ಆರಿಸಿರಲಿಲ್ಲವೇ? ಈಗ ಹೀಗೆ ಆರಿಸಲಾಗದು. ರಿಯಾಲಿಟಿ ಶೋಗಳಲ್ಲಿ ಹೆಣ್ಣುವೇಷ ಹಾಕಿದ ಗಂಡು ಆಡುವ ಸೆಕ್ಸಿಸ್ಟ್ ಮಾತುಗಳ ಅರ್ಥವನ್ನು ಪುಟಾಣಿ ಕೇಳಿದರೆ, ಅಪ್ಪ ಅಮ್ಮನ ತಲೆ ಬಿಸಿಯಾಗುತ್ತದೆ. ಸೆನ್ಸಾರ್ ಇಲ್ಲದ ಮಾಧ್ಯಮಗಳಲ್ಲಿ ಬಂಧಮುಕ್ತವಾದ ಜೋಕುಗಳು ಬಿಕರಿಯಾಗುತ್ತಿವೆ. ಇದು ತಪ್ಪೋ, ಸರಿಯೋ ಎಂಬ ಜಿಜ್ಞಾಸೆ ಚಟಾಕಿ ಹಾರಿಸುವವರಲ್ಲೂ ಕೆಲವರಿಗೆ ಇದೆ. ನಟ–ನಿರ್ದೇಶಕ ಕಾಶಿನಾಥ್ ಈ ಕುರಿತು ಹಿಂದೊಮ್ಮೆ ಮನೋಜ್ಞವಾಗಿ ವಿವರಿಸಿದ್ದರು: ‘ಪೋಲಿತನ ಎನ್ನುವುದು ನಮ್ಮ ಸಂಸ್ಕೃತಿಯ ಭಾಗ. ಸಿನಿಮಾ ನೋಡುವವರು ಅದರ ಪೂರ್ಣಪಾಠದ ಕುರಿತು ತಲೆಕೆಡಿಸಿಕೊಳ್ಳುವುದಿಲ್ಲ. ಪ್ರಸಂಗಗಳನ್ನಷ್ಟೇ ಇಟ್ಟುಕೊಂಡು ಮಾತನಾಡುತ್ತಾರೆ. ಅದು ಸಿನಿಮಾಗೆ ಇರುವ ಶಕ್ತಿಯೂ ಹೌದು, ಮಿತಿಯೂ ಹೌದು. ಸ್ಟ್ರೆಸ್ ಬಸ್ಟರ್‌ಗಳು ಎಲ್ಲರಿಗೂ ಬೇಕು. ನೆಮ್ಮದಿ ಕರುಣಿಸುವ ಇಂತಹ ಜೋಕುಗಳೂ ಸ್ಟ್ರೆಸ್ ಬಸ್ಟರ್‌ಗಳೇ. ಕುತರ್ಕವಿರುವ ಯಾವುದೇ ಹಾಸ್ಯವನ್ನು ಜನ ನೋಡಲಾರರು’.

ಎಲ್ಲ ಕಾಲದಲ್ಲೂ ಇಂತಹದ್ದೊಂದು ಭಾವಾಭಿವ್ಯಕ್ತಿ ಇದ್ದೇಇತ್ತು. ಕಂಪನಿ ನಾಟಕಗಳು ಮುದ್ರಿಸಿದ್ದ ಟಿಕೆಟ್‌ಗಳಲ್ಲಿ ವೇಶ್ಯೆಯರಿಗೆ ಮೀಸಲಾದ ಸ್ಥಳ ಎಂಬ ಉಲ್ಲೇಖ ಇದ್ದುದನ್ನು ಸ್ಮರಿಸುವ ಹಿರೀಕರು ಈಗಲೂ ಇದ್ದಾರೆ. ಈಗ ಅಂತಹ ನಾಟಕಗಳಲ್ಲಿ ಕೇಳುತ್ತಿದ್ದ ಹಾಸ್ಯ ತಂತ್ರಜ್ಞಾನದ ಹೊಸ ವೇದಿಕೆ ಮೇಲೆ ಢಾಳಾಗಿ ಎದ್ದುಕಾಣುತ್ತಿದೆ; ಜೋರಾಗಿ ಕೇಳುತ್ತಿದೆ; ಅದೂ ಫಿಲ್ಟರ್ ಇಲ್ಲದೆ.

ಕಾಮಿಡಿ ಶೋಗಳಲ್ಲಿನ ಮಾತುಗಳನ್ನು ಅಶ್ಲೀಲ ಅಸಭ್ಯ ಎಂದೋ ಗಟಾರದ ಮಾತುಗಳೆಂದೋ ತಳ್ಳಿಹಾಕುವುದು ಸುಲಭ. ಆದರೆ, ಮುಂದೊಂದು ದಿನ ಈ ಹೊತ್ತಿನ ಅಶ್ಲೀಲವೇ ಪರಮ ಸಾಂಪ್ರದಾಯಿಕವಾಗಿ ಕಂಡರೆ ಆಶ್ಚರ್ಯವೇನೂ ಇಲ್ಲ. ಈ ತಲೆಮಾರಿನ ಬಿಡುಬೀಸಾದ ಮಾತುಗಳನ್ನು ವಾಚ್ಯಾರ್ಥದಲ್ಲಷ್ಟೇ ಗ್ರಹಿಸದೆ, ಆ ಮಾತುಗಳು ಸೂಚಿಸುತ್ತಿರುವ ಕಾಲದೇಶಗಳನ್ನೂ ಗಮನಿಸಬೇಕು.

**ಪ್ರತಿಕ್ರಿಯಿಸಿ:** ರಚನಾತ್ಮಕ ಟೀಕೆಟಿಪ್ಪಣಿಗಳಿಗೆ ಸ್ವಾಗತ. ಇಮೇಲ್: feedback@sudha.co.in

